ಆ ಬಗ್ಗೆ ಪ್ರಸ್ತಾಪಿಸಲು, ''ನೀವ್ಯಾಕೆ ಸಾರ್ ಇನ್ನೊಬ್ಬನ ಕೈ ಕೆಳಗೆ ದುಡೀಬೇಕು? ನೀವು ಮನಸ್ಸು ಮಾಡಿ... ಸ್ವಲ್ಪ ಕಷ್ಟ ಪಟ್ರೆ, ನಿಮ್ಮ ಕೈಕೆಳಗೆ ನೂರು ಜನ ದುಡೀತಾರೆ... ನೀವು ನಾನು ಪ್ರೊಡ್ಯೂಸರ್ ಆಗ್ತೀವಿ. ಸೀರಿಯಲ್ ಬೇಡ ಅಂದ್ರೆ ಸಿನಿಮಾ ಮಾಡೋಣ. ಕನ್ನಡದಲ್ಲಿ ಮೂರು ಕೋಟಿಯಿದ್ರೆ ಒಳ್ಳೇ ಸಿನಿಮಾ ಮಾಡಬಹುದು ಅಲ್ವ? ಅದು ನಿಮ್ಮಿಷ್ಟ, ನೀವು ನಿರ್ಧಾರ ಮಾಡಿ ಸೀರಿಯಲ್ಲಾ, ಸಿನಿಮಾನ ಎಂದು'' ಒಮ್ಮೆಲೇ ಬಡಬಡಿಸಿದಾಗ ನನಗೆ ತಲೆಬುಡ ಅರ್ಥವಾಗಲಿಲ್ಲ. ಇದೇನಪ್ಪ ಬೆಳಗ್ಗೆ ಬೆಳಗ್ಗೆ ಕನಸು ಕಾಣ್ತಿದೀನೋ? ಅಥವಾ ಬೆಳ್ಳಂಬೆಳಗ್ಗೆ ಫೋನ್ ಮಾಡಿರೋ ಈ ಶೇಷಾಚಲಂರಾಜುಗೆ ಗ್ರಹಚಾರ ಕೆಟ್ಟು ಹುಚ್ಚು ಗಿಚ್ಚು ಹಿಡಿಯಿತೋ ಎಂಬ ಆತಂಕ ಶುರುವಾಯಿತು.

''ಇದೇನು ಶೇಷು, ಹೀಗೆ ತಮಾಷೆ ಮಾಡ್ತಿದೀಯ? ಬಾಡಿಗೆ, ಮಕ್ಕಳ ಸ್ಕೂಲ್ ಫೀಸ್ ಬ್ಯಾಲೆನ್ಸ್ ಇದೆ. ಮನೆಗೆ ರೇಷನ್ ತರಬೇಕು... ಕೈಯ್ಯಲ್ಲಿ ದುಡ್ಡಿಲ್ಲ, ಕೆಲಸ ಇಲ್ಲ ಅನ್ನೋ ಚಿಂತೇಲಿ ನಾನಿದ್ರೆ ನೀನು ಒಳ್ಳೇ ಕುಶಾಲು ಮಾಡ್ತಿದೀಯಲ್ಲ'' ಎಂದೆ.

''ಇದು ಕುಶಾಲಲ್ಲ ಸಾರ್, ನಿಮ್ಮ ಚಿಂತೆಗಳೆಲ್ಲ ಇವತ್ತಿಗೆ ಮುಗೀತು ಅಂದಕೊಳ್ಳಿ. ಒಳ್ಳೇ ಪಾರ್ಟಿ ಸಿಕ್ಕಿದಾನೆ, ನೀವು ಬಾಡಿಗೆ ಮನೆ ಖಾಲಿ ಮಾಡಿ ಹದಿನೈದೇ ದಿನದಲ್ಲಿ ಸ್ವಂತ ಬಂಗಲೆಗೆ ಶಿಫ್ಟ್ ಆಗೋ ಯೋಗ ನಿಮಗಿದೆ. ಅದೃಷ್ಟ ನಿಮ್ಮ ಮುಂದೆ ಹಾಸ್ಕೊಂಡು ಹೊದ್ಕೊಂಡು ಮಲಗಿದೆ, ನೀವು ಅದನ್ನು ಗುರ್ತಿಸಬೇಕಷ್ಟೇ. ನಿಮ್ಮಿಂದ ನನ್ನ ಬದುಕು ಬೆಳಗುತ್ತೆ ಸಾರ್, ಈ ಜುಜುಬಿ ಕೆಲಸ ಬಿಟ್ಟು ನಾನು ಸಹ ನಿಮ್ಮ ಜೊತೆ ಲೈಫಲ್ಲಿ ಸೆಟ್ಲ್ ಆಗಿಬಿಡ್ತೀನಿ ಸಾರ್...'' ಎಂದ ಶೇಷು ಮತ್ತಷ್ಟು ಗೊಂದಲ ಹುಟ್ಟಿಸಿದ. ಕೊಂಚ ಅಸಹನೆಯಿಂದಲೇ, ''ನಿಂಗೇನು ತಲೆಕೆಟ್ಟಿದ್ಯಾ... ಬೆಳಗ್ಗೆ ಬೆಳಗ್ಗೆ ನಾನೇನಾ ಸಿಕ್ಕಿದ್ದು'' ಎಂದೊಡನೆ ಅವನು, ''ನಾನು ಸೀರಿಯೆಸ್ಸಾಗೇ ಮಾತಾಡ್ತಿದೀನಿ. ನಿಮಗೆ ಡಬಲ್ ಎಂಜಿನ್ ಗೊತ್ತಾ ಸಾರ್'' ಎಂದು ಕೇಳಿದ. ನನಗೆ ರೈಲ್ ಎಂಜಿನ್ ಗೊತ್ತಿತ್ತು. ಇದ್ಯಾವುದು 'ಡಬಲ್ ಎಂಜಿನ್' ಎಂಬ ಗೊಂದಲಕ್ಕೀಡಾದೆ. ಮತ್ತೆ ಅವನೇ ಮಾತು ಮುಂದುವರೆಸಿದ.

''ಸಾರ್, ನೀವು ಹೇಳಿದ್ರಿ... ನೀವು ಹುಟ್ಟಿದ್ದು ಗುಂಜೂರಲ್ಲಿ ಅಂತ. ಅದು ವೈಟ್‌ಫೀಲ್ಡ್‌ಗೆ ಐದಾರು ಕಿಲೋಮೀಟರ್ ದೂರವಿದೆ, ತಮಿಳುನಾಡು ಬಾರ್ಡರ್‌ಗೆ ಇಪ್ಪತ್ತು ಕಿಲೋಮೀಟರ್ ದೂರದಲ್ಲಿದೆ... ನಿಜಾನ ಸಾರ್'' ಎಂದಾಗ ನಾನು ದಂಗಾದೆ. ನನ್ನ ಊರಿನ ಹೆಸರನ್ನಷ್ಟೇ ಯಾವಾಗಲೋ ಒಮ್ಮೆ ಅವನಿಗೆ ಹೇಳಿದ ನೆನಪು. ಆದರೆ ಅವನು ನನ್ನ ಊರನ್ನು ಅಳೆದು ತೂಗಿದವನ ರೀತಿ ಊರಿನ ಚೆಕ್ಕುಬಂದಿ ಹೇಳುತ್ತಿರುವುದನ್ನು ಕೇಳಿ ಬೆರಗಾದೆ. ನನ್ನ ಮೌನ ಕಂಡು ಮತ್ತೆ ಮುಂದುವರಿದ ಅವನು, ''ಅಷ್ಟೇ ಅಲ್ಲ ಸಾರ್, ನಿಮ್ಮ ತಂಗೀನ ನೀವು ಬಾಗೇಪಲ್ಲಿ ಸಮೀಪದ ಒಂದು ಹಳ್ಳಿಗೆ ಮದ್ವೆ ಮಾಡಿ ಕೊಟ್ಟಿದೀರ ಅಲ್ವಾ?'' ಎಂದ. ನಾನು ಮತ್ತಷ್ಟು ಗೊಂದಲಕ್ಕೊಳಗಾದೆ. ನನ್ನ ತಂಗೀನ ಕೊಟ್ಟಿರುವುದು ಬಾಗೇಪಲ್ಲಿ ಹತ್ತಿರದ ಒಂದು ಹಳ್ಳಿಗೇನೇ. ಆದ್ರೆ ನನ್ನ ತಂಗಿ, ಅವಳ ಗಂಡ ಇಬ್ಬರೂ ನಾನು ಹುಟ್ಟಿ ಬೆಳೆದ ಗುಂಜೂರಿನಲ್ಲೇ ಬದುಕನ್ನ ಕಟ್ಟಿಕೊಂಡಿದಾರೆ, ಅವರಿಗೂ ನನ್ನ ಭವಿಷ್ಯಕ್ಕೂ ಏನು ಸಂಬಂಧ? ಅವನ ಮಾತಿನ ಹಿಂದುಮುಂದು ಗೊತ್ತಾಗಲಿಲ್ಲ.

''ಸಾರ್, ನಿಮ್ಮೂರು ಬಂಗಾರದ ನೆಲ. ಆದ್ರೆ, ನಿಮ್ಮ ತಂಗಿಯನ್ನು ಕೊಟ್ಟಿರೋ ಊರು ವಜ್ರದ ನೆಲ ಸಾರ್, ನಮ್ಮ ಆಪರೇಷನ್‌ಗೆ'' ಎಂದಾಗ ನನಗೆ ಮತ್ತಷ್ಟು ದಿಕ್ಕುತಪ್ಪಿದಂತಾಯ್ತು. ಚಿಕ್ಕಬಳ್ಳಾಪುರ ಜಿಲ್ಲೆಯಲ್ಲೇ ಹಿಂದುಳಿದ, ಬರ ಪೀಡಿತ ತಾಲ್ಲೂಕು ಬಾಗೇಪಲ್ಲಿ ಇವನ